ಬೆಂಗಳೂರು ನಗರ 3ನೇ ಅಪರ, ಬಿಜಾಪುರ, ಚಿತ್ರದುರ್ಗ, ದಕ್ಷಿಣ ಕನ್ನಡ, ಗುಲ್ಬರ್ಗಾ, ಹಾಸನ ಕೋಲಾರ, ರಾಯಚೂರು, ಶಿವಮೊಗ್ಗ, ಉತ್ತರ ಕನ್ನಡ, ಉಡುಪಿ, ಬಾಗಲಕೋಟೆ, ಗದಗ, ಕೊಪ್ಪಳ, ಚಾಮರಾಜನಗರ ಮತ್ತು ಹಾವೇರಿ ಜಿಲ್ಲೆಗಳಲ್ಲಿ ಗ್ರೂಪ್-ಡಿ ಹುದ್ದೆಗಳು ಖಾಲಿಯಿದ್ದು, ಇನ್ನುಳಿದ ಜಿಲ್ಲೆಗಳಲ್ಲಿ ಭರ್ತಿ ಮಾಡಲಾಗಿದೆ.

ಈ ಹುದ್ದೆಗಳನ್ನು ಭರ್ತಿ ಮಾಡಲು ವ್ಯಂದ ಮತ್ತು ನೇಮಕಾತಿ ನಿಯಮಗಳಿಗೆ ತಿದ್ದುಪಡಿ ಮಾಡಲು ಕ್ರಮ ಕೈಗೊಳ್ಳಲಾಗುತ್ತಿದೆ. ಸಧ್ಯ ವಿವಿಧ ಇಲಾಖೆಗಳಿಂದ ನಿಯೋಜನೆ ಮೇಲೆ ಹುದ್ದೆಗಳನ್ನು ಭರ್ತಿ ಮಾಡಲಾಗಿದೆ, ಕೆಲಸ ನಿರ್ವಹಿಸುತ್ತಿದ್ದಾರೆ.

5. ಅನುಬಂಧ II ತಡವಾಗಿ ಬಂದ ಪ್ರಶ್ನೋತ್ತರಗಳು (10.7.2003ರಿಂದ 8.8.2003)

ಕಾರವಾರ ಬಂದರನ್ನು ಅಭಿವೃದ್ಧಿಪಡಿಸುವುದು

2270 (2936) : ಶ್ರೀ ಬೆಲ್ಲದ್ ಚಂದ್ರಕಾಂತ್ ಗುರಪ್ಪ (ಧಾರವಾಡ) ಮಾನ್ಯ ಮೀನುಗಾರಿಕೆ ಮತ್ತು ಬಂದರುಗಳ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಕಾರವಾರದ ಬಂದರು ಅಭಿವೃದ್ಧಿಗೆ ಸರ್ಕಾರ ಯೋಜನೆ ಸಿದ್ದಪಡಿಸಿದೆಯೇ? ಸಿದ್ದಪಡಿಸಿದ್ದಲ್ಲಿ ಯೋಜನೆಯ ವಿವರ ನೀಡುವುದು?

ಶ್ರೀ ವಸಂತ ವಿ. ಸಾಲಿಯಾನ (ಮೀನುಗಾರಿಕೆ ಮತ್ತು ಬಂದರುಗಳ ರಾಜ್ಯ ಸಚಿವರು)

ಅ) ಹೌದು.

ಹಾಲಿ ಕಾರವಾರ ಬಂದರಿನಲ್ಲಿ ಬ್ರೇಕ್ ವಾಟರ್ ನಿರ್ಮಾಣವನ್ನು ಕೈಗೊಳ್ಳಲಾಗಿದೆ. 2ನೇ ಹಂತದ ಕಾಮಗಾರಿಗೆ ಸಲಹೆಗಾರರನ್ನು ನೇಮಿಸಿ (ಮೆ: ಕರ್ನಾಟಕ ತಾಂತ್ರಿಕ ಸಲಹಾ ಸಮಿತಿ-TECSOK) ಪೂರ್ವಭಾವಿ ವರದಿಯನ್ನು ಪಡೆಯಲಾಗಿದೆ. ಸದರಿ ವರದಿಯು ಸರ್ಕಾರ ಪರಿಶೀಲನೆಯಲ್ಲಿರುತ್ತದೆ.

ಕಾರವಾರ ಬಂದರಿನ ಮೂಲಕ ಕಂಟೈನರ್ ಸೇವೆ containerisation ಬಗ್ಗೆ ಪ್ರಸ್ತಾವನೆಯು ಪರಿಶೀಲನೆಯಲ್ಲಿದೆ.

ಕಾರವಾರ ಬಂದರಿನಲ್ಲಿ ಹೂಳೆತ್ತಲು ಹಾಗೂ ಬಂದರಿನ ಆಳವನ್ನು ಹೆಚ್ಚಿಸಲು ಯೋಜನೆಯನ್ನು ತಯಾರಿಸಲಾಗಿದೆ.

ಬಂದರಿನ ಸುರಕ್ಷತೆಯನ್ನು ಹೆಚ್ಚಿಸಲು ಕ್ರಮವನ್ನು ತೆಗೆದುಕೊಳ್ಳಲಾಗಿದೆ.

ಮೀನುಗಾರಿಕೆ ಇಲಾಖೆಯಲ್ಲಿ ಹೊಸ ಕಾರ್ಯಕ್ರಮಗಳು

2288 (2737) : ಶ್ರೀ ಜಯಪ್ರಕಾಶ್ ಹೆಗ್ಡೆ ಕೆ. (ಬ್ರಹ್ಮಾವರ) ಮಾನ್ಯ ಮೀನುಗಾರಿಕೆ ಮತ್ತು ಬಂದರುಗಳ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಕಳೆದ ಮೂರು ವರ್ಷಗಳಲ್ಲಿ ಮೀನುಗಾರಿಕಾ ಇಲಾಖೆಯು ಕೈಗೊಂಡ ಹೊಸ ಕಾರ್ಯಕ್ರಮಗಳು/ಯೋಜನೆಗಳು ಯಾವುವು;

ಆ) ಅವುಗಳಿಗೆ ಅನುಮೋದಿಸಿದ ಮೊತ್ತವೆಷ್ಟು;

ಇ) ಪ್ರಗತಿಯಲ್ಲಿರುವ ಯೋಜನೆಗಳ ಕ್ಷೇತ್ರವಾರು ವಿವರ ನೀಡುವುದು?

ಶ್ರೀ ವಸಂತ ವಿ. ಸಾಲಯಾನ (ಮೀನುಗಾರಿಕೆ ಹಾಗು ಬಂದರು ರಾಜ್ಯ ಸಚಿವರು)

ಅ) ಕಳೆದ ಮೂರು ವರ್ಷಗಳಲ್ಲಿ ಮೀನುಗಾರಿಕಾ ಇಲಾಖೆಯು ಕೈಗೊಂಡ ಹೊಸ ಕಾರ್ಯಕ್ರಮಗಳು ಈ ಕೆಳಗಿನಂತಿವೆ.

1. ಆರ್.ಐ.ಡಿಇಫ್. ಯೋಜನೆಯಲ್ಲಿ ಹೊಸ ಕಾಮಗಾರಿಗಳು
2. ಕೇಂದ್ರ ಪುರಸ್ಕೃತ ಪಾಯೋಗಿಕ ಜಲಾಶಯ ಅಭಿವೃದ್ಧಿ ಯೋಜನೆ
3. ಎನ್.ಸಿ.ಡಿ.ಸಿ. ನೆರವಿನ ಸಮಗ್ರ ಒಳನಾಡು ಮೀನುಗಾರಿಕೆ ಅಭಿವೃದ್ಧಿ ಯೋಜನೆ

ಯೋಜನೆಗಳ ವಿವರಗಳನ್ನು ಅನುಬಂಧದಲ್ಲಿ ನೀಡಲಾಗಿದೆ.

ಆ) ಈ ಯೋಜನೆಗಳಿಗೆ ಅನುಮೋದಿಸಿದ ಮೊತ್ತ ಮತ್ತು ಮಂಜೂರಾದ ಮೊತ್ತದ ವಿವರಗಳನ್ನು ಅನುಬಂಧದಲ್ಲಿ ನೀಡಲಾಗಿದೆ.

ಇ) ಈ ಯೋಜನೆಗಳಿಗೆ ಕ್ಷೇತ್ರವಾರು ವಿವರ ಅನುಬಂಧದಲ್ಲಿ ನೀಡಲಾಗಿದೆ.

ಅನುಬಂಧ

ಮೀನುಗಾರಿಕೆ ಇಲಾಖೆಯಲ್ಲಿ ಕಳೆದ ಮೂರು ವರ್ಷಗಳಲ್ಲಿ ಕೈಗೊಂಡ ಹೊಸ ಕಾರ್ಯಕ್ರಮಗಳ / ಯೋಜನೆಗಳ ವಿವರ

1	2	3	4	5
ಕ್ರಮ ಸಂಖ್ಯೆ	ಕಾರ್ಯಕ್ರಮ	ಅನುಮೋದಿಸಿದ ಮೊತ್ತ	ಮಂಜೂರಾದ ಮೊತ್ತ	ಕಾರ್ಯಕ್ರಮ ಕೈಗೊಳ್ಳಲಾಗುತ್ತಿರುವ ಕ್ಷೇತ್ರದ ಹೆಸರು
	2000–01			
1.	ಆರ್.ಐ.ಡಿ.ಎಫ್. ಯೋಜನೆಯಲ್ಲಿ 6 ರಸ್ತೆಗಳು ಮತ್ತು ಒಂದು ಸೇತುವೆ ಕಾಮಗಾರಿ	94.43	65.00	ಕಾಮ, ಉಡುಪಿ, ಕುಂದಾಪುರ ಮತ್ತು ಬ್ರಹ್ಮಾವರ
	2001–02			
1.	ಆರ್.ಐ.ಡಿ.ಎಫ್. ಯೋಜನೆಯಲ್ಲಿ 11 ರಸ್ತೆಗಳು ಮತ್ತು ಒಂದು ಸೇತುವೆ ಕಾಮಗಾರಿ	249.36	105.00	ಕಾಪು, ಉಡುಪಿ, ಕುಂದಾಪುರ ಬ್ರಹ್ಮಾವರ, ಬಂಟವಾಳ, ಕಾರವಾರ ಮತ್ತು ಕುಮಟ
2.	ಕೇಂದ್ರ ಪುರಸ್ಕೃತ ಪ್ರಾಯೋಗಿಕ ಜಲಾಶಯ ಅಭಿವೃದ್ಧಿ ಯೋಜನೆ	16.25	2001–02ರಲ್ಲಿ 9.25 ಲಕ್ಷ 2002–03ರಲ್ಲಿ 7.00 ಲಕ್ಷ	ಹುಲಿಯದುರ್ಗಾ ಮತ್ತು ಯಲಹಂಕ
	2002–03			
1.	ಆರ್.ಐ.ಡಿ.ಎಫ್ ಯೋಜನೆಯಲ್ಲಿ 30 ರಸ್ತೆಗಳು 4 ಸೇತುವೆಗಳು ಕಾಮಗಾರಿ	1047.9	307.00	ಕಾಪು ಉಡುಪಿ, ಕುಂದಾಪುರ ಬ್ರಹ್ಮಾವರ, ಬಂಟವಾಳ, ಕಾರವಾರ ಕುಮಟ, ಮಲ್ಪಿ ಮತ್ತು ಮೂಡ ಬಿದ್ರಿ ಬಳ್ಳಾರಿ, ರಾಯಚೂರು, ಹಾವೇರಿ
2.	ಎನ್.ಸಿ.ಡಿ.ಸಿ. ನೆರವಿನ ಸಮಗ್ರ ಒಳನಾಡು ಮೀನುಗಾರಿಕೆ ಅಭಿವೃದ್ಧಿ ಯೋಜನೆ	1340.66	25.00	ಶಿವಮೊಗ್ಗ ಧಾರವಾಡ ಮತ್ತು ದಾವಣಗೆರೆ